

ದಿಗಂತ್ ಮತ್ತು ಐಂದ್ರಿತಾ

◆ ಬೀದಿ ನಾಯಿ ರಕ್ಷಿಸಿ, ಆರೈಕೆ ಮಾಡ್ತಿದ್ದೀರಂತೆ, ನಿಜಾನಾ?

ಈಚೆಗೆ ಮಂಚನಬೆಲೆ ಜಲಾಶಯದ ಕಡೆಗೆ ಹೋಗಿದ್ದೆ. ಅಲ್ಲಿನ ರಸ್ತೆ ಬದಿಯಲ್ಲಿ ಬೀದಿ ನಾಯಿ ಅಪಘಾತಕ್ಕೀಡಾಗಿ ನರಳಾಡುತ್ತಿತ್ತು. ಬಹುಶಃ ಯಾವುದೋ ವಾಹನ ಅದರ ಮೇಲೆ ಹರಿದಿರಬೇಕು ಅನಿಸುತ್ತೆ. ಅದನ್ನು ಕಂಡು ಬೇಜಾರಾಯಿತು. ಕೂಡಲೇ ಅದಕ್ಕೆ ಚಿಕಿತ್ಸೆ ಕೊಡಿಸಿ ಮನೆಗೆ ಕರೆದೊಯ್ದು ಆರೈಕೆ ಮಾಡುತ್ತಿದ್ದೇನೆ.

ಬೀದಿನಾಯಿಗಳು ತುಂಬಾ ಸಮಸ್ಯೆ ಅನುಭವಿಸುತ್ತಿವೆ. ನನ್ನ ಪ್ರಕಾರ ನಮ್ಮ ದೇಶಗಳ ನಾಯಿಗಳನ್ನು ಇಷ್ಟಪಡುವವರ ಸಂಖ್ಯೆ ಶೇ. 10ರಷ್ಟಿದೆ. ಅವರೆಲ್ಲರು ಬೀದಿನಾಯಿಗಳ ಬಗ್ಗೆ ಕಾಳಜಿ ವಹಿಸಬೇಕು. ನಾಯಿಗಳ ಸಂಖ್ಯೆಯ ಜೊತೆಗೆ ಸಮಸ್ಯೆಯೂ ಹೆಚ್ಚುತ್ತಿದೆ. ಅವುಗಳ ಸಮಸ್ಯೆ ಬಗ್ಗೆ ಕಾಳಜಿ ವಹಿಸಬೇಕಾದ ಜವಾಬ್ದಾರಿ ನಮ್ಮೆಲ್ಲರದ್ದು. ಸ್ಥಳೀಯ ಸಂಸ್ಥೆಗಳು ಬೀದಿನಾಯಿಗಳಿಗೆ ಕಟ್ಟುನಿಟ್ಟಾಗಿ ಸಂತಾನಹರಣ ಚಿಕಿತ್ಸೆ ಜಾರಿಗೊಳಿಸಬೇಕು. ತಮ್ಮ ಸುತ್ತಮುತ್ತಲಿನ ಪ್ರದೇಶಗಳ ಬೀದಿನಾಯಿಗಳನ್ನು ಅಲ್ಲಿನವರೇ ದತ್ತು ಪಡೆದು, ಅವುಗಳ ಆರೈಕೆ ಮಾಡಬೇಕು. ಆಗ ಬೀದಿ ನಾಯಿಗಳ ಸಮಸ್ಯೆ ಪರಿಹಾರವಾಗುತ್ತದೆ.

ಬದಲಾವಣೆ ಇಲ್ಲ. ಮದುವೆಯ ಪ್ರತಿ ಕಾರ್ಯಗಳಲ್ಲೂ ಸ್ವಲ್ಪ ತಿರುವುಗಳು ಇದ್ದವು. ತೀರಾ ವಿಭಿನ್ನತೆ ಅನ್ನೋದು ಏನೂ ಕಾಣಲಿಲ್ಲ. ನಮ್ಮ ಸಂಪ್ರದಾಯದಲ್ಲಿ ಸಂಜೆ ವೇಳೆ ಮದುವೆ ಮಾಡಿದರೆ, ಅವರ ಸಂಪ್ರದಾಯದಲ್ಲಿ ಬೆಳಿಗ್ಗೆ ಮದುವೆ ಮಾಡಲಾಗುತ್ತದೆ. ನಮ್ಮಿಬ್ಬರ ಕುಟುಂಬಗಳು ಪರಸ್ಪರ ಬೆರೆಯುತ್ತವೆ. ಆಚಾರ ವಿಚಾರ, ಕಾರ್ಯಕ್ರಮಗಳಲ್ಲಿ ಎರಡೂ ಕುಟುಂಬ ಸದಸ್ಯರು ಮುಕ್ತವಾಗಿ ಪಾಲ್ಗೊಳ್ಳುತ್ತಾರೆ.

◆ ಮದುವೆ ನಂತರ ಸಿನಿಮಾಗಳಲ್ಲಿ ಕಾಣಿಸಿಕೊಳ್ಳುವುದು ಕಡಿಮೆಯಾಯಿತು ಅನಿಸಲ್ವಾ?

ಹೌದು, ಸ್ವಲ್ಪ ದಿನ ಬ್ರೇಕ್ ತೆಗೆದುಕೊಂಡಿದ್ದೆ. ಈಗ ಕನ್ನಡದ ಎರಡು ಸಿನಿಮಾಗಳು ಸೆಟ್ಟೇರಿವೆ. ಬಾಲಿವುಡ್‌ನಲ್ಲಿ ಎರಡು ಸಿನಿಮಾ ಮಾಡುತ್ತಿದ್ದೇನೆ. ಕನ್ನಡದ 'ಗರುಡ' ಹಾಗೂ 'ಪ್ರೇಮಂಪೂಜಂ' ಚಿತ್ರೀಕರಣ ನಡೆಯುತ್ತಿದೆ. 'ಗರುಡ' ಸಿನಿಮಾದಲ್ಲಿ, ಕಾಲೇಜಿಗೆ ಹೋಗುವ ಬಬ್ಲಿ ಬಬ್ಲಿ ಗರ್ಲ್ ಆಗಿ ಕಾಣಿಸಿಕೊಳ್ಳುತ್ತಿದ್ದೇನೆ. ಈ ಪಾತ್ರ ತುಂಬಾ ಎನರ್ಜಿಟಿಕ್ ಆಗಿದೆ. 'ಪ್ರೇಮಂ ಪೂಜಂ' ಸಿನಿಮಾದ ಪಾತ್ರದ ಬಗ್ಗೆ ಎಲ್ಲಿಯೂ ರಿವೀಲ್ ಮಾಡಬಾರದೆಂಬ ನಿರ್ಬಂಧ ಚಿತ್ರತಂಡದ್ದು. ಹಾಗಾಗಿ, ಆ ಪಾತ್ರದ ಬಗ್ಗೆ ಏನೂ ಹೇಳುವುದಿಲ್ಲ.



ಬಾಲಿವುಡ್‌ನ 'ಭವ್ವೆ' ಸಿನಿಮಾದಲ್ಲಿ ರಾಣಿಯ ಪಾತ್ರ ನನ್ನದು. ನಾಟಕ ತಂಡವೊಂದು ಗುಜರಾತಿನ ಚಿಕ್ಕ ಚಿಕ್ಕ ಊರುಗಳಿಗೆ ಹೋಗಿ, ರಾಮಾಯಣ ನಾಟಕ ಪ್ರದರ್ಶನ ಮಾಡುತ್ತದೆ. ಆ ನಾಟಕದಲ್ಲಿ ಸೀತೆಯ ಪಾತ್ರ ನನ್ನದು. ಊರಿನಿಂದ ಊರಿಗೆ ಹೋಗಿ ಇದೇ ರೀತಿ ನಾಟಕ ಪ್ರದರ್ಶನ ಮಾಡುವುದು ಆ ನಾಟಕ ತಂಡದ ಕೆಲಸ. 'ತನು ವೆಡ್ಸ್ ಮನು' ತಂಡ ಆ ಸಿನಿಮಾ ಕೆಲಸ ಮಾಡುತ್ತಿದೆ. ಅರ್ಬಾಜ್ ಖಾನ್ ನಟಿಸಲಿರುವ ಹೆಸರಿಡದ ಸಿನಿಮಾವೊಂದಕ್ಕೆ ನಾಯಕಿಯಾಗಿ ಆಯ್ಕೆಯಾಗಿದ್ದೇನೆ. ಅದು ರೊಮ್ಯಾಂಟಿಕ್ ಥ್ರಿಲ್ಲರ್ ಆಗಿದ್ದು, ಸ್ಕ್ರಿಪ್ಟ್ ತುಂಬಾ ಚೆನ್ನಾಗಿದೆ. ಈ ಎಲ್ಲ ಸಿನಿಮಾಗಳು ಈ ವರ್ಷವೇ ತೆರೆಕಾಣುವ ನಿರೀಕ್ಷೆ ಇದೆ. ಸದ್ಯ ಆ ಸಿನಿಮಾಗಳ ಚಿತ್ರೀಕರಣದಲ್ಲಿ ಬಿಜಿಯಾಗಿದ್ದೇನೆ.

◆ ಫ್ಯಾಷನ್ ಅಂದ್ರೆ ಐಂದ್ರಿತಾಗೆ ಎಷ್ಟು ಇಷ್ಟ, ಎಷ್ಟು ಕಷ್ಟ?

ಬಟ್ಟೆ ನಮಗೆ ಹೆಚ್ಚು ಆರಾಮದಾಯಕ ವಾಗಿರಬೇಕು. ಅದನ್ನಷ್ಟೇ ನಾನು ಹೆಚ್ಚು ಇಷ್ಟಪಡುವೆ. ಡ್ರೆಸ್, ಲುಕ್ ಮೇಲೆ ಹೆಚ್ಚು ಸಮಯ ವ್ಯಯ ಮಾಡಲ್ಲ. ಫ್ಯಾಷನ್ ಶೋ ರೀತಿಯ ಕಾರ್ಯಕ್ರಮಗಳಿಗೆ ಹೋಗುವಾಗ, ಆ ವಾತಾವರಣಕ್ಕೆ ಬೇಕಿದ್ದಂತೆ ಮೇಕಪ್ ಮಾಡಿಕೊಳ್ಳುವೆ. ಅದರ ಹೊರತಾಗಿ ಮೇಕಪ್ ಬಗ್ಗೆ ಅಷ್ಟೇನೂ ವ್ಯಾಮೋಹ ಇಲ್ಲ. ಸಿಂಪಲ್ ಆಗಿರುವುದು ನನಗಿಷ್ಟ. ರೆಡಿ ಆಗಲು ನಾನು ಜಾಸ್ತಿ ಪೂರ್ವಸಿದ್ಧತೆ ಏನೂ ಮಾಡಿಕೊಳ್ಳಲ್ಲ. ಟ್ರೆಂಡಿ ಬಟ್ಟೆಗಳ ಬಗ್ಗೆ ಕೆಲವೊಮ್ಮೆ ಯೋಚನೆ ಮಾಡುತ್ತೇನೆ.

◆ ನಿಮಗೆ ಇಷ್ಟವಾದ ಸಿನಿಮಾ ಹಾಗೂ ನಿಮ್ಮ ಕನಸಿನ ಪಾತ್ರ ಯಾವುದು?

ಇಷ್ಟದ ಸಿನಿಮಾಗಳು ಸಾಕಷ್ಟಿವೆ. ಬಾಲಿವುಡ್‌ನಲ್ಲಿ ತೆರೆಕಂಡ 'ಹೈವೇ' ಸಿನಿಮಾ ತುಂಬಾ ಇಷ್ಟ. ಅದರಲ್ಲಿ ಆಲಿಯಾ ಭಟ್ ತುಂಬಾ ಚೆನ್ನಾಗಿ ಅಭಿನಯಿಸಿದ್ದಾರೆ. ಅವರ ಪಾತ್ರವು ನನ್ನ ಡ್ರೀಮ್ ಕ್ಯಾರೆಕ್ಟರ್ ಆಗಿದ್ದು, ಅದನ್ನು ನಾನು ಮಾಡಲು ಇಚ್ಛಿಸುತ್ತೇನೆ.

ಇಲ್ಲಿನ ಸಿನಿ ಇಂಡಸ್ಟ್ರಿ ಬಗ್ಗೆ ಹೇಳುವುದಾದರೆ, ನಾನು ಸ್ಯಾಂಡಲ್‌ವುಡ್‌ಗೆ ಕಾಲಿಟ್ಟಾಗ ಇಲ್ಲಿನ ವಾತಾವರಣ ವಿಭಿನ್ನವಾಗಿತ್ತು. ಕಮರ್ಷಿಯಲ್ ಸಿನಿಮಾಗಳೇ ತುಂಬಾ ಹಿಟ್ ಆಗುತ್ತಿದ್ದವು. ಇಲ್ಲಿನ ಇಂಡಸ್ಟ್ರಿಯಲ್ಲಿ ಪುರುಷ ಪ್ರಾಧಾನ್ಯತೆ ಹೆಚ್ಚು ಇತ್ತು. ಸ್ಕ್ರಿಪ್ಟ್‌ಗಳು ಕೂಡ ಹೀರೊ ಕೇಂದ್ರಿತವಾಗಿದ್ದವು. ಸಿನಿಮಾಗಳು ಆ್ಯಕ್ಷನ್, ಫೈಟ್‌ಗಳಿಂದ ತುಂಬಿರುತ್ತಿದ್ದವು. ಅದರ ಬಗ್ಗೆ ನನಗೆ ಆಕ್ಷೇಪವಿತ್ತು. ಮಹಿಳಾ ಪ್ರಧಾನ ಸಿನಿಮಾಗಳು ಬರುತ್ತಾ ಇರಲಿಲ್ಲ. ಬಂದರೂ ಜನರಿಗೆ ಇಷ್ಟ ಆಗುತ್ತಿರಲಿಲ್ಲ. ಹಿಂದಿಯಲ್ಲಿ ಈಗ ಮಹಿಳಾ ಪ್ರಧಾನ ಸಿನಿಮಾಗಳು ಸಾಕಷ್ಟು ಬರುತ್ತಿವೆ. ಹೀರೊಗಿಂತ ಹೀರೋಯಿನ್‌ಗೆ ಹೆಚ್ಚು ಆದ್ಯತೆ ಸಿಗುತ್ತಿದೆ. ಕನ್ನಡದಲ್ಲೂ ಬದಲಾವಣೆ ಆಗಬೇಕು. ಬಹುಶಃ ಮುಂದಿನ ದಿನಗಳಲ್ಲಿ ಆ ಬದಲಾವಣೆ ಆಗಬಹುದು.

◆ ನಿಮ್ಮ ಫಿಟ್‌ನೆಸ್ ಬಗ್ಗೆ ಹೇಳಿ.

ನಾನು ಮುಂಚೆ ಅಷ್ಟೊಂದು ಫಿಟ್‌ನೆಸ್ ಫ್ರೀಕ್ ಆಗಿರಲಿಲ್ಲ. ಈ ವಿಚಾರದಲ್ಲಿ ದಿಗಂತ್ ತುಂಬಾ ಕಟ್ಟುನಿಟ್ಟು. ಈಜು, ಸೈಕ್ಲಿಂಗ್, ಜಿಮ್, ಯೋಗ ಸೇರಿದಂತೆ ಏನಾದ್ರೂ ಮಾಡುತ್ತಲೇ ಇರ್ತಾರೆ. ಅವರ ಜೊತೆ ಸೇರಿ ನಾನೂ ಈಗೀಗ ಫಿಟ್‌ನೆಸ್ ಫ್ರೀಕ್ ಆಗಿಬಿಟ್ಟಿದ್ದೇನೆ. ಕರ್ನಾಟಕದಲ್ಲಿಯೇ ಬೇರೆ ಬೇರೆ ಊರುಗಳಿಗೆ ಸೈಕ್ಲಿಂಗ್ ಹೋಗುತ್ತಿರುತ್ತೇವೆ. 50ರಿಂದ 60ಕಿ.ಮೀ. ವರೆಗೆ ಸೈಕ್ಲಿಂಗ್ ಮಾಡುತ್ತಿರುತ್ತೇವೆ. ದಿಗಂತ್‌ಗೆ ಸ್ಕೂಬಾ ಡೈವಿಂಗ್, ಪ್ರವಾಸ, ಬೆಟ್ಟ ಹತ್ತುವುದು, ಟ್ರಕ್ಕಿಂಗ್ ಅಂದ್ರೆ ಇಷ್ಟ. ಫಿಟ್ ಆಗಿರಲು ಇದು ಸೂಕ್ತ.

◆ ಸೈಕ್ಲಿಂಗ್ ಹೊರತಾಗಿ ಏನೇನು ಮಾಡುತ್ತೀರಿ?

ಯೋಗ ಮಾಡುವೆ. ಜೊತೆಗೆ ಸ್ವಿಮ್ಮಿಂಗ್ ಅಂದ್ರೆ ನನಗೆ ತುಂಬಾ ಇಷ್ಟ. ಈಚೆಗೆ ಸ್ವಿಮ್ಮಿಂಗ್ ಹಾಗೂ ಸೈಕ್ಲಿಂಗ್ ಮಾಡುವುದನ್ನು ಅಭ್ಯಾಸ ಮಾಡಿಕೊಂಡಿದ್ದೇನೆ. ಎರಡು ತಿಂಗಳ ಮುಂಚೆ ನಿತ್ಯ ಜಿಮ್‌ಗೆ ಹೋಗಿ ದೇಹ ದಂಡಿಸುತ್ತಿದ್ದೆ. ದಿಗಂತ್ ಹಾಗೂ ನಾನು ಜೊತೆಗೂಡಿ ಅಡ್ವೆಂಚರ್ ಟೂರ್ ಮಾಡುತ್ತಲೇ ಇರುತ್ತೇವೆ. ■